**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ: 92/2020**

| | | |
|---|---|---|
| ಫಿರ್ಯಾದಿಃ | | ಸರಕಾರದ ಪರವಾಗಿ<br>ಪೋಲಿಸ್ ವೃತ ನಿರೀಕ್ಷಕರು,<br>ಹೊನ್ನಾವರ ವೃತ್ತ, ಹೊನ್ನಾವರ. |
| | | -ವಿರುದ್ಧ- |
| ಆರೋಪಿಃ | 1) | ಸಜ್ಜಾದ ಅಹ್ಮದ ತಂದೆ ಕುತುಬುದ್ದಿನ ಗನಿ,<br>ವಯಸ್ಸುಃ 28 ವರ್ಷಗಳು,<br>ಉದ್ಯೋಗಃ ಅಡಿಕೆ ವ್ಯಾಪಾರ,<br>ಸಾಕೀನಃ ತೊಹಿದಮೊಹಲ್ಲಾ, ಚಂದಾವರ,<br>ತಾಲೂಕುಃ ಹೊನ್ನಾವರ. |
| | 2) | ಮುಬಾಶೀರ ತಂದೆ ಕುತುಬುದ್ದಿನ ಗನಿ,<br>ವಯಸ್ಸುಃ30 ವರ್ಷಗಳು,<br>ಉದ್ಯೋಗಃ ಇಲೆಕ್ಟ್ರೀಷಿಯನ್ ಕೆಲಸ,<br>ಸಾಕೀನಃ ತೊಹಿದಮೊಹಲ್ಲಾ, ಚಂದಾವರ,<br>ತಾಲೂಕುಃ ಹೊನ್ನಾವರ. |

**ದೋಷಾರೋಪಣೆ**

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನೀವು ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

ದಿನಾಂಕಃ 2019 ಜುಲೈ ತಿಂಗಳ ಮಧ್ಯದಲ್ಲಿ (ಅಂದರೆ ದಿನಾಂಕಃ 18-07-2019 ರಂದು ಬೆಳಗಿನ ಜಾವ 01-30 ಗಂಟೆಯ ಸಮಯದಲ್ಲಿ ಆರೋಪಿತರಾದ ನೀವು ಹೊನ್ನಾವರ ಪೋಲಿಸ್ ಠಾಣಾ ಸರಹದ್ದಿನಲ್ಲಿರುವ ಹೊನ್ನಾವರ ತಾಲೂಕು ಚಂದಾವರ, ಗಣಪತಿ ದೇವಸ್ಥಾನ ಕೇರಿಯಲ್ಲಿರುವ ಶ್ರೀ ದುರ್ಗಾ

ಪರಮೇಶ್ವರಿ ದೇವಸ್ಥಾನದ ಬಾಗಿಲಕ್ಕೆ ಹಾಕಿದ್ದ ಬೀಗವನ್ನು ಕಬ್ಬಿಣದ ರಾಡಿನಿಂದ ಮುರಿದು ದೇವಸ್ಥಾನದ ಒಳಗಡೆ ಹೋಗಿ ಗರ್ಭ ಗುಡಿಯ ಎದುರಿಗೆ ಇಟ್ಟಿದ್ದ ಕಾಣಿಕೆ ಹುಂಡಿಯನ್ನು ದೇವಸ್ಥಾನದ ಹಿಂದುಗಡೆ ತೆಗೆದುಕೊಂಡು ಹೋಗಿ, ಒಡೆದು ಅದರೊಳಗಿದ್ದ ಸುಮಾರು ರೂ.3,000-00 ಕಾಣಿಕೆ ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 457 ಮತ್ತು 380 ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಯನ್ನ ಆರೋಪಿ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಆತ ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ 12-11-2021

ಸ್ಥಳಃ ಹೊನ್ನಾವರ.

**(ಶ್ರೀ ಕುಮಾರ ಜಿ.,)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಕಂಡಾಧಿಕಾರಿಗಳು, ಹೊನ್ನಾವರ.**